# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 536
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು
4. ಉತ್ತರಿಸುವ ದಿನಾಂಕ : 24.09.2020.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ/ಅನುದಾನಿತ/ ಅನುದಾನರಹಿತ ಕಾನೂನು ಕಾಲೇಜುಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ 6 ಸರ್ಕಾರಿ, 27 ಅನುದಾನಿತ **ಹಾಗೂ** 74-ಅನುದಾನರಹಿತ ಕಾನೂನು ಕಾಲೇಜುಗಳಿವೆ. |
| ಆ) | ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ಯಾವ ಯಾವ ಮೂಲ ಸೌಕರ್ಯಗಳ ಹಾಗೂ ಸಿಬ್ಬಂದಿಗಳ ಕೊರತೆ ಇದೆ: (ಪ್ರತ್ಯೇಕವಾಗಿ ವಿವರ ನೀಡುವುದು) | ಸರ್ಕಾರಿ ಕಾನೂನು ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆಯ ಬಗ್ಗೆ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಅನುದಾನಿತ ಕಾಲೇಜುಗಳಿಗೆ ವೇತನಕ್ಕಾಗಿ ಅನುದಾನವನ್ನು ನೀಡಲಾಗುತ್ತಿದ್ದು, ಮೂಲ ಸೌಕರ್ಯಗಳಿಗೆ ಇಲಾಖೆಯಿಂದ ಯಾವುದೇ ಅನುದಾನ ಬಿಡುಗಡೆ ಮಾಡುತ್ತಿರುವುದಿಲ್ಲ. ಸರ್ಕಾರಿ ಕಾನೂನು ಮತ್ತು ಅನುದಾನಿತ ಸಿಬ್ಬಂದಿಗಳ ಕೊರತೆಯ ಮಾಹಿತಿಯನ್ನು ಅನುಬಂಧ-2& 3 ರಲ್ಲಿ ನೀಡಲಾಗಿದೆ. |
| (ಇ) | ಈ ಕೊರತೆಗಳನ್ನು ನೀಗಿಸುವ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಸರ್ಕಾರಿ ಕಾನೂನು ಕಾಲೇಜುಗಳಲ್ಲಿ ಕೊರತೆಯನ್ನು ನೀಗಿಸುವ ಸಂಬಂಧ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.<br><br>ಸರ್ಕಾರಿ ಕಾನೂನು ಕಾಲೇಜುಗಳಲ್ಲಿ ಸಿಬ್ಬಂದಿ ಕೊರತೆ ನೀಗಿಸುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ;<br><br>**ಪ್ರಾಂಶುಪಾಲರು;**<br><br>ಕಾಲೇಜು ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಯು.ಜಿ.ಸಿ ಮಾರ್ಗಸೂಚಿಗಳು/ ಮಾನದಂಡಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿದೆ. ಅದರಂತೆ ಒಟ್ಟು 310 ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ 06 ಸರ್ಕಾರಿ ಕಾನೂನು ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ದಿನಾಂಕ:09.09.2020ರ ಸಂಖ್ಯೆ:ಇಡಿ/121/ಡಿಸಿಇ/2018ರಲ್ಲಿ ಅಂತಿಮ ಅಧಿಸೂಚನೆಯನ್ನು ಕಾಲೇಜು ಶಿಕ್ಷಣ ಇಲಾಖೆಯು ಹೊರಡಿಸಿರುತ್ತದೆ.<br><br>ಸಹಾಯಕ ಪ್ರಾಧ್ಯಾಪಕರು; ದೈಹಿಕ ಶಿಕ್ಷಣ ಬೋಧಕರು ಮತ್ತು ಗ್ರಂಥಪಾಲಕರು; ಹಾಗೂ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಸೂಚಿಸಿರುವ ಸೂಚನೆ, ಆದೇಶಗಳನ್ವಯ ಕ್ರಮಕೈಗೊಳ್ಳಲಾಗುತ್ತಿದೆ. ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. |

..2

| | | |
|---|---|---|
| ಈ) | ಸದರಿ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ. ವೇತನವನ್ನು ನೀಡಲಾಗುತ್ತಿದೆಯೇ: | ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾನೂನು ಪದವಿ ಕಾಲೇಜುಗಳ ಉಪನ್ಯಾಸಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರುಗಳಿಗೆ ಸರ್ಕಾರದ ಆದೇಶಗಳನ್ವಯ ಯುಜಿಸಿ ನಿಗದಿತ ವಿದ್ಯಾರ್ಹತೆ ಹೊಂದಿರುವ ಸರ್ಕಾರಿ ಮತ್ತು ಅನುದಾನಿತ ಕಾನೂನು ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ವೇತನವನ್ನು ನೀಡಲಾಗುತ್ತಿದೆ. |

ಸಂಖ್ಯೆ: ಲಾ–ಹೆಚ್‌ಆರ್‌ಎಮ್/85/ 2020

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಸಣ್ಣ ನೀರಾವರಿ ಸಚಿವರು

ಅನುಬಂಧ–1

ಕರ್ನಾಟಕ ರಾಜ್ಯದಲ್ಲಿ 06 ಸರ್ಕಾರಿ ಕಾನೂನು ಕಾಲೇಜುಗಳಿರುತ್ತವೆ. ಸದರಿ ಕಾಲೇಜುಗಳಲ್ಲಿ 04 ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿರುತ್ತವೆ. 01 ಕಾಲೇಜಿನ ಕಟ್ಟಡ ಕಾಮಗಾರಿಗೆ 2015-16ನೇ ಸಾಲಿನಲ್ಲಿ ರೂ.200.00 ಲಕ್ಷಗಳ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸರ್ಕಾರಿ ಕಾನೂನು ಕಾಲೇಜುಗಳಲ್ಲಿ ಪಠ್ಯ ಪುಸ್ತಕ ಮತ್ತು ಪೀಠೋಪಕರಣಗಳ ಕೊರತೆ ಇರುತ್ತದೆ.

N.Radha 23/09/2020

(ಎನ್. ರಾಧ)

ಸರ್ಕಾರದ ಅಧೀನ ಕಾರ್ಯದರ್ಶಿ

ಕಾನೂನು ಇಲಾಖೆ (ಮಾನವ ಹಕ್ಕುಗಳು)

23/9/20

ಕಾನೂನು ಇಲಾಖೆ (ಮಾನವ ಹಕ್ಕುಗಳ ಶಾಖೆ) ಅನುಬಂಧ-೩

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಕಾನೂನು ಕಾಲೇಜುಗಳಲ್ಲಿ ದಿನಾಂಕ:31.08.2020 ರವರೆಗೆ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಅನುದಾನಿತ ಹುದ್ದೆಗಳ ವಿವರ (ಬೋಧಕ-ಬೋಧಕೇತರ ಹುದ್ದೆಗಳ ಮಾಹಿತಿ-ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿವಾರು)

| ಕ್ರ. ಸಂ. | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ | ಕಾಲೇಜುಗಳ ಸಂಖ್ಯೆ | ಪ್ರಾಂಶುಪಾಲರು | | | ಸಹಾಯಕ ಪ್ರಾಧ್ಯಾಪಕರು | | | ದೈಹಿಕ ಶಿಕ್ಷಣ ಬೋಧಕರು | | | ಗ್ರಂಥಪಾಲಕರು | | | ಮ್ಯಾನೇಜರ್ | | | ಅಧೀಕ್ಷಕರು | | | ಪ್ರಥಮ ದರ್ಜೆ ಸಹಾಯಕರು | | | ದ್ವಿತೀಯ ದರ್ಜೆ ಸಹಾಯಕರು | | | ಗುಮಾಸ್ತ-ಯಾ-ಬೆರಳಚ್ಚು ಗಾರರು | | | ಬೆರಳಚ್ಚು ಗಾರರು | | | ಗ್ರಂಥಾಲಯ ಸಹಾಯಕರು | | | ಸಹಾಯಕರು | | | ಪರಿಚಾರಕರು | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant | Sanctioned | Working | Vacant |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 |
| 1 | ಬೆಂಗಳೂರು | 4 | 4 | 3 | 1 | 56 | 32 | 24 | 4 | 1 | 3 | 4 | 4 | 0 | 0 | 0 | 0 | 6 | 2 | 4 | 7 | 5 | 2 | 14 | 9 | 5 | 4 | 2 | 2 | 4 | 2 | 2 | 3 | 3 | 0 | 8 | 4 | 4 | 23 | 11 | 12 | **137** | **78** | **59** |
| 2 | ಮೈಸೂರು | 4 | 3 | 2 | 1 | 26 | 18 | 8 | 2 | 1 | 1 | 4 | 3 | 1 | 0 | 0 | 0 | 4 | 1 | 3 | 4 | 3 | 1 | 8 | 3 | 5 | 3 | 2 | 1 | 4 | 4 | 0 | 3 | 3 | 0 | 12 | 4 | 8 | 14 | 9 | 5 | **87** | **53** | **34** |
| 3 | ಮಂಗಳೂರು | 2 | 2 | 0 | 2 | 27 | 18 | 9 | 2 | 2 | 0 | 2 | 2 | 0 | 0 | 0 | 0 | 3 | 2 | 1 | 3 | 3 | 0 | 5 | 5 | 0 | 2 | 1 | 1 | 2 | 0 | 2 | 2 | 2 | 0 | 5 | 4 | 1 | 13 | 10 | 3 | **68** | **49** | **19** |
| 4 | ಶಿವಮೊಗ್ಗ | 3 | 3 | 1 | 2 | 13 | 13 | 0 | 2 | 2 | 0 | 1 | 0 | 1 | 0 | 0 | 0 | 3 | 1 | 2 | 4 | 4 | 0 | 8 | 7 | 1 | 3 | 3 | 0 | 3 | 3 | 0 | 3 | 3 | 0 | 7 | 3 | 4 | 12 | 7 | 5 | **62** | **47** | **15** |
| 5 | ಕಲಬುರಗಿ | 5 | 1 | 1 | 0 | 21 | 14 | 7 | 4 | 2 | 2 | 5 | 2 | 3 | 0 | 0 | 0 | 5 | 1 | 4 | 6 | 4 | 2 | 10 | 5 | 5 | 4 | 3 | 1 | 4 | 2 | 2 | 4 | 4 | 0 | 12 | 6 | 6 | 25 | 17 | 8 | **101** | **61** | **40** |
| 6 | ಧಾರವಾಡ | 9 | 7 | 4 | 3 | 53 | 31 | 22 | 8 | 3 | 5 | 8 | 6 | 2 | 0 | 0 | 0 | 9 | 3 | 6 | 11 | 9 | 2 | 19 | 10 | 9 | 9 | 6 | 3 | 10 | 8 | 2 | 8 | 6 | 2 | 19 | 8 | 11 | 38 | 19 | 19 | **199** | **113** | **86** |
| | ಒಟ್ಟು | 27 | 20 | 11 | 9 | 196 | 126 | 70 | 22 | 11 | 11 | 24 | 17 | 7 | 0 | 0 | 0 | 30 | 10 | 20 | 35 | 28 | 7 | 64 | 39 | 25 | 25 | 17 | 8 | 27 | 19 | 8 | 23 | 21 | 2 | 63 | 29 | 34 | 125 | 73 | 52 | 654 | 401 | 253 |

<u>**ಅನುಬಂಧ-3**</u>

ಸರ್ಕಾರಿ ಕಾನೂನು ಕಾಲೇಜುಗಳಲ್ಲಿ ಮಂಜೂರಾಗಿರುವ, ಕರ್ತವ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರಗಳು

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1 | ಪ್ರಾಂಶುಪಾಲರು | 6 | 0 | 6 |
| 2 | ಬೋಧಕರು (ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈ.ಶಿ.ಬೋಧಕರು) | 78 | 46 | 32 |
| 3 | ಬೋಧಕೇತರರು | 51 | 11 | 40 |
| ಒಟ್ಟು | | **135** | **57** | **78** |

NRadha 23/09/2020

(ಎನ್. ರಾಧ)

ಸರ್ಕಾರದ ಅಧೀನ ಕಾರ್ಯದರ್ಶಿ

ಕಾನೂನು ಇಲಾಖೆ (ಮಾನವ ಹಕ್ಕುಗಳು)

23/9/20

## ಅನುಬಂಧ-4

ಕರ್ನಾಟಕ ರಾಜ್ಯದಲ್ಲಿ 06 ಸರ್ಕಾರಿ ಕಾನೂನು ಕಾಲೇಜುಗಳಿರುತ್ತವೆ. ಸದರಿ ಕಾಲೇಜುಗಳಲ್ಲಿ 04 ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿರುತ್ತವೆ. 01 ಕಾಲೇಜಿನ ಕಟ್ಟಡ ಕಾಮಗಾರಿಗೆ 2015-16ನೇ ಸಾಲಿನಲ್ಲಿ ರೂ.200.00 ಲಕ್ಷಗಳ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. 01 ಕಾಲೇಜಿಗೆ ಇದುವರೆವಿಗೂ ನಿವೇಶನ ದೊರೆತಿರುವುದಿಲ್ಲ. ನಿವೇಶನ ದೊರೆತ ನಂತರ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಕಾನೂನು ಕಾಲೇಜುಗಳಿಗೆ ಪಠ್ಯ ಪುಸ್ತಕ ಮತ್ತು ಪೀಠೋಪಕರಣಗಳಿಗೆ ಲಭ್ಯವಿರುವ ಅನುದಾನದ ಆಧಾರದ ಮೇರೆಗೆ ಪ್ರತಿ ವರ್ಷ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, 2019-2020ನೇ ಸಾಲಿನಲ್ಲಿ ಪಠ್ಯ ಪುಸ್ತಕ ಮತ್ತು ಪೀಠೋಪಕರಣಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ.

| ಕ್ರ ಸಂ | ಕಾಲೇಜಿನ ಹೆಸರು | ಪಠ್ಯ ಪುಸ್ತಕಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನ (ರೂ/- ಗಳಲ್ಲಿ) | ಪೀಠೋಪಕರಣಗಳಿಗೆ ಬಿಡುಗಡೆ ಮಾಡಿರುವ ಅನುದಾನ (ರೂ/- ಗಳಲ್ಲಿ) |
|---|---|---|---|
| 1 | ಸರ್ಕಾರಿ ಕಾನೂನು ಕಾಲೇಜು ರಾಮನಗರ | 13930 | 151245 |
| 2 | ಸರ್ಕಾರಿ ಕಾನೂನು ಕಾಲೇಜು ಕೋಲಾರ | 16200 | 95000 |
| 3 | ಸರ್ಕಾರಿ ಕಾನೂನು ಕಾಲೇಜು ಹಾಸನ | 17150 | 95000 |
| 4 | ಸರ್ಕಾರಿ ಕಾನೂನು ಕಾಲೇಜುಹೊಳೆನರಸೀಪುರ | - | 95000 |
| 5 | ಸರ್ಕಾರಿ ಕಾನೂನು ಕಾಲೇಜು ವರ್ತೂರು, ಕಲಬುರಗಿ | 107960 | - |
| 6 | ಸರ್ಕಾರಿ ಕಾನೂನು ಕಾಲೇಜು ಚಾಮರಾಜನಗರ | - | - |

NRadha 23/09/2020

(ಎನ್. ರಾಧ)

ಸರ್ಕಾರದ ಅಧೀನ ಕಾರ್ಯದರ್ಶಿ

ಕಾನೂನು ಇಲಾಖೆ (ಮಾನವ ಹಕ್ಕುಗಳು)

23/9/20